**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ**

**ಸಿಸಿ ಸಂಖ್ಯೆ: 2143/2022**

ಚಾ.ಸಾ–1, ಪ್ರಾ.ಸಾ–1

| | | |
|---|---|---|
| ಹೆಸರು | : | ಪದ್ಮ |
| ಗಂಡನ ಹೆಸರು | : | ಲೇಟ್ ಟಿ.ಸಿ. ಅಗಸ್ತೇಗೌಡ |
| ವಯಸ್ಸು | : | 70 |
| ವೃತ್ತಿ | : | ಗೃಹಿಣಿ |
| ವಾಸ | : | ಹಳೇ ತಿರುಮಕೂಡಲು, ತಿ. ನರಸೀಪುರ |

**ದಿನಾಂಕ 24.07.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಮಾನ್ಯ ಎಪಿಪಿ ರವರಿಂದಃ**

ಚಾಸಾ– 2 ಮತ್ತು 3 ರವರ ಪರಿಚಯವಿದೆ.

ತಿ. ನರಸೀಪುರ ಪಟ್ಟಣದ ಹಳೇ ತಿರುಮಕೂಡಲಿನಲ್ಲಿರುವ ಶ್ರೀ ಚೌಡೇಶ್ವರಿ ದೇವಸ್ಥಾನದಲ್ಲಿ ನಾನು ಪೂಜೆ ಕೆಲಸ ಮಾಡುತ್ತೇನೆ. ದಿನಾಂಕ 13.06.2022 ರಂದು ರಾತ್ರಿ 8.00 ಗಂಟೆಗೆ ಆ ದೇವಸ್ಥಾನದ ಬೀಗ ಹಾಕಿಕೊಂಡು ಆ ದೇವಸ್ಥಾನದ ಪಾರುಪತ್ತೆದಾರರಾದ ಪವನ್ ರವರಿಗೆ ಕೀಯನ್ನು ನೀಡಿ ಮನೆಗೆ ಹೋಗಿದ್ದೆ.

ದಿನಾಂಕ 14.06.2022 ರಂದು ಬೆಳಿಗ್ಗೆ 8.00 ಗಂಟೆಗೆ ನಾನು ಆ ದೇವಸ್ಥಾನವನ್ನು ತೆರೆಯಲು ಸದರಿ ಪವನ್ ರವರಿಂದ ಕೀಯನ್ನು ಪಡೆದು ಅದನ್ನು

ತೆರೆದಿದ್ದು, ದೇವಸ್ಥಾನದ ಒಳಗೆ ಇದ್ದ ಎರಡು ಹುಂಡಿಗಳು ಇರಲಿಲ್ಲ. ದೇವಸ್ಥಾನದ ಕಿಟಕಿಯನ್ನು ಮತ್ತು ಪಕ್ಕದ ಬಾಗಿಲನ್ನು ಜಖ:ಗೊಳಿಸಲಾಗಿತ್ತು. ಆ ಹುಂಡಿಗಳು ಇದ್ದ ಜಾಗದಲ್ಲಿ ಸ್ವಲ್ಪ ನಾಣ್ಯಗಳು ಬಿದ್ದಿದ್ದವು.

ದೇವಸ್ಥಾನದ ಒಳಗೆ ಪರಿಶೀಲಿಸಿದಾಗ ಕಪ್ಪು ಬಣ್ಣದ ಒಂದು ಟೋಪಿ ಮತ್ತು ಕಿಟಕಿಯ ಕಬ್ಬಿಣದ ಸರಳಿನ ಚೂರುಗಳು ಇದ್ದವು. ದೇವಸ್ಥಾನದ ಸುತ್ತಮುತ್ತಾ ನೋಡಿರುತ್ತೇವೆ. ಯಾವುದೇ ಮಾಹಿತಿ ಸಿಗಲಿಲ್ಲ.

ಆನಂತರ ದೂರನ್ನು ಪೊಲೀಸ್ ಠಾಣೆಗೆ ನೀಡಿರುತ್ತೇನೆ. ಅದನ್ನು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ.1 ಮತ್ತು 1(ಎ) ಎಂದು ಗುರುತಿಸಲಾಯಿತು.

ನಾನು ದೂರನ್ನು ನೀಡಿದ ಮರುದಿನ ಪೊಲೀಸರು ಘಟನಾ ಸ್ಥಳಕ್ಕೆ ಬಂದು ಪರಿಶೀಲಿಸಿರುತ್ತಾರೆ. ಅವರು ಶ್ವಾನ ದಳದೊಂದಿಗೆ ಸ್ಥಳವನ್ನು ಪರಿಶೀಲಿಸಿದ್ದು, ಆ ರೀತಿ ಪರಿಶೀಲನೆಯ ವೇಳೆಗೆ ನದಿಯ ಬಳಿ ಎರಡು ಹುಂಡಿಗಳು ದೊರೆತವು. ಆ ಹುಂಡಿಗಳೇ ಆ ದೇವಸ್ಥಾನದಿಂದ ಕಳವು ಆಗಿದ್ದ ಹುಂಡಿಗಳಾಗಿರುತ್ತವೆ.

ಪೊಲೀಸರು ಸ್ಥಳದಲ್ಲಿ ಮಧ್ಯಾಹದ ವೇಳೆಗೆ ಪಂಚನಾಮವನ್ನು ಜರುಗಿಸಿರುತ್ತಾರೆ. ಅದನ್ನು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ.2 ಮತ್ತು 2(ಎ) ಎಂದು ಗುರುತಿಸಲಾಯಿತು.

ಪಂಚನಾಮದ ವೇಳೆಗೆ ಪೊಲೀಸರು ಸದರಿ ಟೋಪಿ ಮತ್ತು ಕಬ್ಬಿಣ ಸರಳಿನ ಚೂರುಗಳನ್ನು ಜಪ್ತಿಪಡಿಸಿರುತ್ತಾರೆ.

**ಸದರಿ ಮಾಲುಗಳನ್ನು ಹಾಜರುಪಡಿಸಿರದ ಕಾರಣ ಸಹಾಯಕ ಸರ್ಕಾರಿ ಅಭಿಯೋಜಕರ ಕೋರಿಕೆ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕದಂಡಾಧಿಕಾರಿ,**
**ತಿ.ನರಸೀಪುರ**